ಕಥೆ

# ಫೈಸಲ್




## ಸ. ರಘುನಾಥ

ಕಲೆ: ರಾಮಕೃಷ್ಣ ಸಿದ್ರಪಾಲ


ತಂಬಿಗೆ ಹಿಡಿದು ಹಾಲು ಹಿಂಡುತ್ತ ತಂಬಿಗೆ ತುಂಬಿದ ಹಾಲನ್ನು ಪಕ್ಕದಲ್ಲಿರಿಸಿಕೊಂಡಿದ್ದ ತಪ್ಪಲೆಗೆ ಸುರಿದು, ಕೆಚ್ಚಲು ಸವರಿ, ಈ ಹೊತ್ತೂ ಬೆಳಿಗ್ಗೆ ಹಿಂಡಿದಷ್ಟೇ ಹಾಲನ್ನು ಕೊಟ್ಟೀಯೇನೆ ಎಂದು ಹಸುವನ್ನು ಕೇಳುತ್ತ ಹಾಲು ಹಿಂಡುತ್ತಿದ್ದಳು ಚಿನ್ನಪಾಪಲು. ಬೆಳಿಗ್ಗೆ ಹಾಲು ಹಿಂಡುವಾಗಲೂ ಹೀಗೆಯೇ ಮಾತು, ನಿನ್ನೆ ಸಾಯಂಕಾಲ ಹಿಂಡಿದಷ್ಟೇ ಹಾಲನ್ನು ಕೊಟ್ಟೀಯೇನೆ ಎಂದು ಕೇಳುತ್ತಿದ್ದಳು. ಹಸು ಸುಮ್ಮನೆ ನಿಂತಿರುತಿತ್ತು. ಆಗ ತನ್ನಲ್ಲೇ ಅಂದುಕೊಳ್ಳುತ್ತಿದ್ದಳು: ಕೊಡುವವರು ಮಾತನಾಡುವುದಿಲ್ಲವೇನೊ?

ನೀನೇನೋ ಕೊಡೋಷ್ಟನ್ನ ವಂಚನೆಯಿಲ್ಲದೆ ಕೊಡುತ್ತಿ. ನನ್ನ ಕರ್ಮ ನೋಡು ಹೇಗಿದೇಂತ! ಏನಾಗುತ್ತೋ ಮುಂಡೇದಕ್ಕೆ? ಬೆಳಿಗ್ಗೆ ಕೊಟ್ಟಷ್ಟನ್ನ ಸಾಯಂಕಾಲ ಕೊಡೊಲ್ಲ, ಸಾಯಂಕಾಲ ಕೊಟ್ಟಷ್ಟನ್ನ ಬೆಳಿಗ್ಗೆ ಕೊಡಲ್ಲ ಎಂದು ಅವನಿಗೆ ಕೇಳಿಸೋಂತೆ ಗೊಣಗಬೇಕು. ಇದೆಂಥ ಬದುಕೆ ನಂದು? ನಿನ್ನ ಹೀಗೆ ಬೈತಲೇ ಮೂರುಕಾಸು ಮಾಡಿಕೊಂತ ಬಚ್ಚಿಟ್ಕೊಬೇಕು. ಇದೆಲ್ಲ ನನ್ನ ಕರ್ಮ ಅಲ್ಲದೆ ಬೇರೇನೆ? ಕ್ಷಮಿಸೆ ತಾಯಿ ನನ್ನ.

ಇದು ಚಿನ್ನಪಾಪಲು ದಿನವೂ ಹಾಲು ಕರೆಯುವ ಎರಡು ಹೊತ್ತಿನಲ್ಲೂ ಹಸುವಿಗೆ ಹೇಳುತ್ತಿದ್ದ ಮಾತು.

ಒಂದು ಹೊತ್ತು ಪಾವು, ಇನ್ನೊಂದು ಹೊತ್ತು ಪಡಿ ಹಾಲನ್ನು ಉಳಿಸಿಕೊಂಡು ಗಂಡನ ಕೈಗೆ ಹಾಲಿನ ತಪ್ಪಲೆ ಕೊಟ್ಟು ಡೈರಿಗೆ ಹಾಕಿ ಬರಲು ಕಳುಹಿಸುತ್ತಿದ್ದಳು. ಅವನು ಹಿಂದಿರುಗುವುದರೊಳಗೆ ಆ ಹಾಲನ್ನು ವರ್ತನೆ ಮಾಡಿಕೊಂಡವರ ಮನೆಗಳಿಗೆ ಮಗಳ ಕೈಗೆ ಕೊಟ್ಟು ಕಳುಹಿಸಿಬಿಡುತ್ತಿದ್ದಳು. ಇದರಿಂದ ಬರುವ ದುಡ್ಡನ್ನು ಕೂಡಿಟ್ಟು ಊರಿಗೆ ಹೋದಾಗ ಅಪ್ಪನ ಕೈಗೆ ಕೊಡುತ್ತಿದ್ದಳು. ಅವನು ಅದಕ್ಕೆ ತಾನೊಂದಿಷ್ಟು ಕೂಡಿಸಿ ಕುರಿಯನ್ನು ಕೊಂಡು ತನ್ನ ಕುರಿಗಳೊಂದಿಗೆ ಮೇಯಿಸುತ್ತಿದ್ದ. ಹೀಗೆ ಮಗಳು